ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 688/2022**

**ಫ್ರಾಸಾ- 4 ಚಾಸಾ- 4**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಜಯಲಕ್ಷ್ಮಿ |
| ತಂದೆಯ ಹೆಸರುಃ | : | ಪರಮೇಶ |
| ವಯಸ್ಸುಃ | : | 40 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಕೊಟ್ಟಿಗೆರಹಟ್ಟಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 10-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಚಾಸಾ-1 ನನ್ನ ಅಣ್ಣ, ಚಾಸಾ-2 ನನ್ನ ಮಗಳು, ಚಾಸಾ-3 ನನ್ನ ಗಂಡ ಕಾ.ಸಂ.ಒ.ಬಾಲಕನ ಪರಿಚಯವಿಲ್ಲ.

2.2020ರಲ್ಲಿ ಚಾಸಾ-2 ಶಿರಾದಲ್ಲಿ ಓದುತ್ತಿದ್ದಳು, ನಂತರ ಆಕೆ ಒಂದು ದಿನ ಚಾಸಾ-1 ರವರ ಮನೆಗೆ ಬಂದಿದ್ದಳು.ನಂತರ ಚಾಸಾ-1 ರವರು ಕರೆ ಮಾಡಿ ಚಾಸಾ-2 ರವರು ಕಾಣೆಯಾಗಿದ್ದಾರೆಂದು ತಿಳಿಸಿದರು. ಆಗ ನಾವು ಚಾಸಾ-1 ರವರ ಮನೆ ಬಳಿ ಬಂದೆವು. ಆಗಲೇ ಚಾಸಾ-1 ದೂರುಕೊಟ್ಟಿದ್ದರು. ನಂತರ ಪೊಲೀಸರು ನಮ್ಮಗಳನ್ನು, ಠಾಣೆಗೆ ಕರೆದುಕೊಂಡು ಬಂದಿದ್ದೇವೆ ಬನ್ನಿ ಎಂದು ತಿಳಿಸಿದರು. ಹೋದೆವು, ಆಗ ಆಕೆ ತಾನು ಚಿಕ್ಕಮ್ಮನ ಮನಗೆ ಹೋಗಿದ್ದಾಗಿ ತಿಳಿಸಿದಳು. ಯಾರ ಜೊತೆ ಹೋಗಿದ್ದೆಂದು ತಿಳಿಸಲಿಲ್ಲ ಕಾ.ಸಂ.ಒ.ಬಾಲಕನಮೇಲೆ ಏಕೆ ಪ್ರಕರಣ ದಾಖಲಾಗಿದೆ ಎಂದು ಗೊತ್ತಿಲ್ಲ. ಕಾ.ಸಂ.ಒ.ಬಾಲಕ ನನ್ನ ಮಗಳು ಕಾಲೇಜಿಗೆ ಹೋಗುತ್ತಿದ್ದಾಗ ಆಕೆಯನ್ನು ಹಿಂಬಾಲಿಸಿಕೊಂಡು ಹೋಗಿ ಆಕೆಯನ್ನು ಪ್ರೀತಿಸುತ್ತಿದ್ದೇನೆಂದು ಹೇಳಿ ಕರೆದುಕೊಂಡು ಹೋಗಿರುತ್ತಾನೆ ನಂತರ ಅಪ್ರಾಪ್ತ

ವಯಸ್ಕಳಾದ ಆಕೆಯನ್ನು ಮದುವೆಯಾಗಿರುತ್ತಾನೆ ಮತ್ತು ಅಕೆಯ ಮೇಲೆ ಬಲವಂತಾವಾಗಿ ಅತ್ಯಾಚಾರ ಮಾಡಿರುತ್ತಾನೆಂದು ಪೊಲೀಸರಿಗೆ ಮರುಹೇಳಿಕೆ ನೀಡಿಲ್ಲ. ಹಾಗೆಯೇ ಕಾಣೆಯಾದ ಬಗ್ಗೆ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ದಿನಾಂಕ 15-12-20 ರಂದು ಪೊಲೀಸರು ನಮ್ಮನ್ನು ಠಾಣೆಗೆ ಕರೆಸಿದಾಗ ಅಲ್ಲಿ ನನ್ನ ಮಗಳು ಪೊಲೀಸರ ಮುಂದೆ ತಾನು ಹಿರಿಯೂರು ಬಸವರಾಜು ಎಜುಕೇಷನ್ ಟ್ರಸ್ ್ಟ ನಲ್ಲಿ ಎಸ್ ಎಸ್ ಎಲ್ ಸಿ ಓದುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಕಾ.ಸಂ.ಒ.ಬಾಲಕನು ಪ್ರತಿದಿನ ನಾನು ಹೋಗುತ್ತಿದ್ದ ಬಸ್ ನಲ್ಲಿ ಬರುತ್ತಿದ್ದ ಆ ಸಮಯದಲ್ಲಿ ನಮ್ಮಿಬ್ಬರ ಪರಿಚಯವಾಗಿ ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದೆವು, ಆ ವಿಚಾರ ತಿಳಿದು ಆಕೆಯನ್ನು ನಾವು ಚಾಸಾ-1 ರವರ ಮನೆಯಲ್ಲಿ ಬಿಟ್ಟಿದ್ದೆವು, ಆದರೂ ಕೂಡ ತಾನು ಆತನೊಂದಿಗೆ ಸಂಪರ್ಕದಲ್ಲಿದ್ದಳು, ನಂತರದಲ್ಲಿ ಕಾ.ಸಂ.ಒ.ಬಾಲಕ ನಿನ್ನ ತಂದೆ ತಾಯಿ ನಮ್ಮಿಬ್ಬರನ್ನು ಮದುವೆಯಾಗಲು ಬಿಡುವುದಿಲ್ಲ, ಎಲ್ಲಿಯಾದರೂ ಓಡಿಹೋಗಿ ಮದುವೆಯಾಗೋಣ ಎಂದು ಹೇಳಿ ಆಕೆಯನ್ನು ಹೊಸದುರ್ಗಕ್ಕೆ ಬರುವಂತೆ ತಿಳಿಸಿದನು ಎಂದು ಹೇಳಿದಳು ಎಂದರೆ ಸರಿಯಲ್ಲ. ಅದರಂತೆ ದಿಃ1-12-20ರಂದು ಮಧ್ಯಾಹ್ನ 2ವರೆ ಗಂಟೆಗೆ ಆಕೆ ಹೊಸದುರ್ಗಕ್ಕೆ ಹೋದಳು, ಅಲ್ಲಿ ಈ ಕಾ.ಸಂ.ಒ.ಬಾಲಕ ಇದ್ದು ಆತನು ಆಕೆಯನ್ನು ಮೆಣಸಿನ ನಡು ಬೋವಿ ಕಾಲೋನಿ ಎಂಬ ಹಳ್ಳಿಗೆ ಕರೆದುಕೊಂಡು ಹೋದನು ನಂತರ ಆತ ಮತ್ತು ಆತನ ಸಂಬಂಧಿಕರಾದ ಮಂಜುನಾಥ ವಿಶ್ವನಾಥ ಯಲ್ಲಪ್ಪರವರು ಸೇರಿ ಯಲ್ಲಮ್ಮ ದೇವಸ್ಥಾನದ ಮುಂದೆ ಆಕೆಯ ಕೊರಳಿಗೆ ಅರಿಶಿನದಾರ ಕಟ್ಟಿ ಮದುವೆ ಮಾಡಿಸಿದರು ಎಂದು ತಿಳಿಸಿದಳು ಎಂದರೆ ಸರಿಯಲ್ಲ. ನಂತರ ಆಕೆಯನ್ನು ಆತನು ಸಿದ್ದಮ್ಮ ಎಂಬುವವರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಪ್ರತಿದಿನ ಆಕೆಯ ಮೇಲೆ ದೈಹಿಕ ಸಂಪರ್ಕ ಬೆಳೆಸಿದ್ದನು ಎಂದು ತಿಳಿಸಿದಳು ಎಂದರೆ ಸರಿಯಲ್ಲ. ನಂತರ ದೂರು ಕೊಟ್ಟಿರುವ ವಿಚಾರ ತಿಳಿದು ಸದರಿ ಮಂಜುನಾಥ ಈಕೆಯ ಕೊರಳಲ್ಲಿದ್ದ ಅರಿಶಿನದಾರವನ್ನು ತೆಗೆದುಹಾಕಿ ಅರಸೀಕೆರೆಗೆ

ಕರೆದುಕೊಂಡು ಬಂದು ಪೊಲೀಸ್ ಠಾಣೆಗೆ ಹೋಗು ಎಂದು ಹೊರಟುಹೋದರು ಎಂದು ಹೇಳಿರುತ್ತಾಳೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಮರುಹೇಳಿಕೆಯ ಭಾಗವನ್ನು ನಿಪಿ-15 ಎಂದು ಗುರುತಿಸಲಾಯಿತು. ಕೇಸಿನ ವಿಷಯ ಗೊತ್ತಿದ್ದೂ ಆ ಬಗ್ಗೆ ನಿಪಿ-6 ರಂತೆ ಹೇಳಿಕೆ ನೀಡಿದ್ದರೂ ಈಗ ಅವರಿಬ್ಬರೂ ಜೊತೆಯಲ್ಲಿದ್ದು ಸಂಸಾರ ಮಾಡುತ್ತಿದ್ದಾರೆ ಎಂಬ ಕಾರಣಕ್ಕೋಸ್ಕರ ಹಾಗೂ ಕಾ.ಸಂ.ಒ.ಬಾಲಕನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. (ನಿಪಿ-15ನ್ನು ಹಾಸನದ FTSC No.1 ನ್ಯಾಯಾಲಯದಲ್ಲಿ ನಡೆದ ಸ್ಪೆಷಲ್ ಕೇಸ್ ನಂಬರ್ 102/21ರಿಂದ ತರಿಸಿಕೊಳ್ಳಲಾಗಿದೆ, ಇವುಗಳ ದೃಢೀಕೃತ ನಕಲುಗಳನ್ನು ಈ ಕಡತದಲ್ಲಿರಿಸಿ ಮೂಲ ದಾಖಲೆಗಳನ್ನು ಸದರಿ ಕಡತಕ್ಕೆ ಹಿಂದಿರುಗಿಸಲು ಸೂಚಿಸಲಾಗಿದೆ)

**ಪಾಟೀಸವಾಲುಃ** ಕಾ.ಸಂ.ಒ.ಬಾಲಕನ **ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**